ದಿನವೂ ಚರ್ಚ್‌ಗೆ ಹೋದದ್ದಿಲ್ಲ. ಹಾಗೆಂದು ಊರಿನ ದೇವಸ್ಥಾನದ ಬಾಗಿಲನ್ನು ತುಳಿದದ್ದಿಲ್ಲ. ಇದು ಊರವರಿಗೆ ಸ್ವಲ್ಪ ಆಶ್ಚರ್ಯ ಹುಟ್ಟಿಸಿತ್ತಾದರೂ ಯಾರಾದರೂ ಒಬ್ಬರು 'ನೀವು ನಾಸ್ತಿಕರೇ' ಎಂದು ಆಕೆಯನ್ನು ಸುಮ್ಮನೇ ಪ್ರಶ್ನಿಸಿದರೆ, ಆಕೆ 'ದೇವರನ್ನು ನೋಡಿದವರು ಯಾರೂ ಇಲ್ಲ ಎಂದ ಮೇಲೆ ನಾನು ನೋಡುವುದು ಹೇಗೆ?' ಎಂದು ಹೇಳಿ ಆ ಕಾರಣದಿಂದ 'ನಾನು ನಾಸ್ತಿಕಳಲ್ಲ' ಎಂದು ನಕ್ಕು ಆಮೇಲೆ 'ದೇವರನ್ನು ನೋಡುವುದು ಪುಸ್ತಕದಲ್ಲಿ ಸಾಧ್ಯ' ಎಂದು ಹೇಳುತ್ತಾ ಪುಸ್ತಕ ಹಿಡಿದುಕೊಂಡೇ ದಿನಾ ಕೂರುತ್ತಿದ್ದರು.

ಟೀಚರಮ್ಮ ಕೆಲವು ವರುಷದ ಮೇಲೆ ಅರ್ಧ ಎಕರೆಯಷ್ಟು ಜಾಗವನ್ನು ಆ ಊರಲ್ಲೇ ತೆಗೆದುಕೊಂಡು, ಆ ಭಾಗದಲ್ಲಿ ತಮ್ಮ ಪಾಡಿಗೆ ತಾವಾಗಿಯೇ ಇರುವುದು ನಿಧಾನವಾಗಿ ಸೀತಾಪುರದಲ್ಲಿ ಅನೇಕರಿಗೆ ವಿಚಿತ್ರ ಅನಿಸಿದರೂ ತಪ್ಪಿಯೂ ಯಾರೂ ಆಕೆಯನ್ನು ಅದಕ್ಕಾಗಿ ಪ್ರಶ್ನಿಸಿದ್ದಿಲ್ಲ. ಆದರೆ ಟೀಚರ್ ಮಾತ್ರ ಆ ಜಮೀನಿನಲ್ಲಿ ತೆಂಗು, ಮಾವು ಬಾಳೆ, ಚಿಕ್ಕು, ಪೇರಳೆ ಇತ್ಯಾದಿಗಳ ಗಿಡಗಳನ್ನು ಹಾಕಿ ಆದಿತ್ಯವಾರವನ್ನು ಅವುಗಳ ಸೇವೆಗೆ ಮೀಸಲಿರಿಸುತ್ತಿದ್ದುದನ್ನು ನೋಡಿ ಬೆರಗಾದವರೂ ಅಲ್ಲಿ ಇಲ್ಲದಿರಲಿಲ್ಲ. ಈ ನಡುವೆ ಟೀಚರ್ ಸೀತಾಪುರಕ್ಕೆ ಬರುವಾಗ ಅವರ ಜೊತೆ ಇದ್ದ ಅವರ ಒಬ್ಬನೇ ಒಬ್ಬ ಮಗ, ಟೀಚರಮ್ಮ ಕಲಿಸುತ್ತಿದ್ದ ಶಾಲೆಯಲ್ಲಿ ಓದಿ ಆಮೇಲೆ ಸೀತಾಪುರದ ಹೈಸ್ಕೂಲಲ್ಲಿ ಎಸ್ಸೆಸ್ಸೆಲ್ಸಿ ಪಾಸಾಗಿ, ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಪಿ.ಯು.ಸಿ ಮುಗಿಸಿದ. ಪಿ.ಯು.ಸಿ.ಯಲ್ಲಿ ಆತ ರಾಜ್ಯಕ್ಕೆ ಇಪ್ಪತ್ತೇಳನೇ ರ್‍ಯಾಂಕ್ ತೆಗೆದದ್ದರಿಂದ ಸುರತ್ಕಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆತನಿಗೆ ಉಚಿತವಾಗಿ ಸೀಟು ಸಿಕ್ಕಿತ್ತು. ಮುಂದೆ ಆತ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿ ಟಾಟಾ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿಕೊಂಡ. ಆ ತನಕ ಬಾಡಿಗೆ ಮನೆಯಲ್ಲೇ ಇದ್ದ ಟೀಚರಮ್ಮಆಮೇಲೆ ತನ್ನ ಜಮೀನಿನಲ್ಲೇ ಒಂದು ಮನೆ ಕಟ್ಟಿಸಿ ಅಲ್ಲೇ ಇರತೊಡಗಿದರು. ಆದರೂ ಆಕೆ ಮಗನನ್ನು ಓದಿಸುವಾಗ ಪಟ್ಟ ಕಷ್ಟಸುಖಗಳನ್ನು ಮತ್ತು ಮಗ ಉದ್ಯೋಗಸ್ಥನಾದ ಮೇಲೆ ಮಗನಿಂದಾಗಿ ಪಡುತ್ತಿದ್ದ ಸಂಭ್ರಮವನ್ನು ತಪ್ಪಿಯೂ ಯಾರಲ್ಲಿಯೂ ಹೇಳಲು ಮುಂದಾಗುತ್ತಿದ್ದಿಲ್ಲ. ಸಾಂದರ್ಭಿಕವಾಗಿ ಯಾರಾದರೂ 'ಹೀಗಂತೆ?' ಎಂದು ಕೇಳಿದರೆ, 'ಅದನ್ನೆಲ್ಲ ಈಗ ಹೇಳಿ ಏನಾಗಬೇಕಾಗಿದೆ?' ಎಂದು ಸಂತೃಪ್ತರಂತೇ ಇರುತ್ತಿದ್ದರು.

ಟೀಚರಮ್ಮನ ಮಗ ಮದ್ರಾಸಿನಲ್ಲಿ ಉದ್ಯೋಗಸ್ಥನಾಗಿ ಒಮ್ಮೆ ಊರಿಗೆ ಹೊರಟು ಬರುವಾಗ ರೈಲ್ವೆ ಸ್ಟೇಶನ್‌ನಲ್ಲಿ ಅಮ್ಮನಿಗೆಂದು ಒಂದು ಕಿಲೊ ಮಾವಿನಹಣ್ಣುಗಳನ್ನು ತೆಗೆದುಕೊಂಡ. ಆತ ಹಣ್ಣನ್ನು ತೆಗೆದುಕೊಂಡದ್ದು ಅದರ ಸೌಂದರ್ಯ ನೋಡಿ. ಯಾರು ನೋಡಿದರೂ ಅದನ್ನು ಕೈ ಎತ್ತಿ ತೆಗೆದುಕೊಳ್ಳಬೇಕೆಂಬಷ್ಟು ಆಕರ್ಷವಾಗಿದ್ದ ಆ ಹಣ್ಣನ್ನು ಮಾರಾಟಮಾಡುವವನಲ್ಲಿ ಈತ ಈ 'ಹಣ್ಣಿನ ಹೆಸರು ಏನು?' ಎಂದು ಕೇಳಿದಾಗ ಆತ 'ಇದು ನಾಟಿಹಣ್ಣು ಸ್ವಾಮಿ, ಇದರ ಹೆಸರು ನನಗೆ ಗೊತ್ತಿಲ್ಲ. ನಮ್ಮಪ್ಪ ತಂದು ಹಾಕಿದ ಗಿಡದಲ್ಲಿ ಇದು ಆದದ್ದು. ಆದರೆ ಒಮ್ಮೆ ತಿಂದವರು ಮತ್ತೆ ಯಾವತ್ತೂ ಇದು ಬೇಕು ಎಂತಲೇ ಬರುತ್ತಾರೆ' ಎಂದು ಹೇಳಿ, 'ನಾನು ಹತ್ತುವರುಷದಿಂದ ಈ ಹಣ್ಣು ಮಾರುತ್ತಾ ಇದ್ದೇನೆ' ಎಂದು ಜಂಭ ಕೊಚ್ಚಿಕೊಂಡ. ಆಗ ಸಿಸಿಲಾಬಾಯಿಯ ಮಗ ಸಿರಿಲ್ ಪಿರೇರ ಅದನ್ನು ಗಂಭೀರವಾಗಿ ಪರಿಗಣಿಸದೇ ಎಲ್ಲಾ ವ್ಯಾಪಾರಿಗಳೂ ಹೇಳುವುದು ಹೀಗೇ ಎಂದುಕೊಂಡು ನೋಡಲಿಕ್ಕೆ ಸುಂದರವಾದದ್ದರ ಒಳಗೆ ಆ ಸೌಂದರ್ಯದ ರುಚಿ ಇರಬೇಕೆಂದಿಲ್ಲವಲ್ಲ ಎಂದು ತರ್ಕಿಸುತ್ತಾ